ಇಬ್ಬರೂ ಮಾಳಿಗೆ ಮನೆ ಜಿನ್ನೆ ಹತ್ತಿದರು. ಹತ್ತುವಾಗ ಆಕೆ ಹಿಂಬಡು ನೆಗೆಯುತ್ತಿತ್ತು. ಆಕೆ ಹೆಜ್ಜೆಗಳಲ್ಲಿ ದೊಪ ದೊಪ ಸದ್ದಿನ ವಿಶಿಷ್ಟ ಉಲ್ಲಾಸ ಚಿಮ್ಮುತ್ತಿತ್ತು.

ಅಲ್ಲೊಂದು ಗೋಣಿಚೀಲದ ತಟ್ಟು ಹಾಸಲಾಗಿತ್ತು. ಸುತ್ತಲೂ ಏನನ್ನೋ ತುಂಬಿದ ಚೀಲಗಳು. ಸಂಜೆ ಮಕ್ಕತ್ತಲಿಗೇರುತ್ತಿತ್ತು. ಆಕೆ ಆತನ ಕೈ ಹಿಡಿದು ಎದೆಗೆ ಒತ್ತಿದಳು. ದೊಡ್ಡ ಬುಗುಟಿ ಆಕಾರದ ಸ್ತನಗಳು. ಮೊಲದ ಸ್ಪರ್ಶದಂತೆ ಮೆತ್ತಗೆ ಮತ್ತು ಬೆಚ್ಚಗಿನ ಅನುಭವ ನೀಡಿದವು.

'ನಿನ್ನ ಮ್ಯಾಲ ಮನಸೈತಿ ಮಾಮಾ... ನೀ ಕಲತು ನೌಕರಿ ಹಿಡದು ಬರೋತನ ಕಾಯ್ತೀನಿ ಬೇಕಾರೆ... ನನ್ನ ಕೈಬಿಡಬ್ಯಾಡ ಹ್ಮಂ...' ಕೊನೆ ವಾಕ್ಯ ಉಲಿಯುವಾಗ ಚಿಕ್ಕ ಕಂಪನ. ದೈನ್ಯತೆಯಿಂದ ಕೇಳಿದಳು. ಅವಳ ನುಡಿಗಳಲ್ಲಿ ನಿಷ್ಕಲ್ಮಶ ಯಾಚನೆಯಿತ್ತು. ಕಣ್ಣಲ್ಲಿ ಮಿಂಚಿನ ಶಕ್ತಿಗೂ ಮೀರಿದ ಹೊಳಪಿತ್ತು. ಅದು ಸತ್ಯವನ್ನೇ ನುಡಿಯುತ್ತಿತ್ತು.

'ನನಗೂ ನೀ ಅಂದರ ಜೀವಾಳಕಿ... ಆದರ ನೀವ ಭಾಳ ಸಿರಿವಂತರು... ನಾ ಸಾಮಾನ್ಯ ರೈತನ ಮಗಾ... ಹೆಂಗ ಯಾನ ಯಾರಿಗ್ಗೊತ್ತು...!'

ಇಬ್ಬರ ಮನೆತನಗಳಲ್ಲಿಯ ಅಂತರವನ್ನು ಬಿಚ್ಚಿದ. 'ಅದ ಯಾನ ಇರಲಿ... ನಂಗ ನೀನ ಬೇಕು... ನಿಂಗ ಸಾಯೋತನ ಮರಿಯಾಂಗಿಲ್ಲ...' ಆತನನ್ನು ಬಿಗಿದಪ್ಪಿದಳು. ಆ ಅಪ್ಪುಗೆಯಲ್ಲಿ ವಿಲಕ್ಷಣ ಸುಖವಿತ್ತು. ಬಣ್ಣಿಸಲಾಗದ್ದು. ಒಂದು ವಿಲಕ್ಷಣ ಸಿಹಿಯ ತುಣುಕನ್ನು

